ಮೈಸೂರ ಗೆಜೆಟ್.

ಸಂ. 42.] ಸರಕಾರದಿಂದ ಪ್ರಾಯಿಸಿ ಆದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ॥ 3, ಸ್ರ 1907.

II ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸ್ಟಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್ ತಾರೀಖು 17ನೆ ಡಿಸೆಂಬರ್ 1906.

(1) ಕೋಲಾರ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಇದರಡಿ ನಮೂದಿಸಿರುವ ತಾಲ್ಲೂಕುಗಳಲ್ಲಿನ ಸ್ಪೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿ ಅರಗಿನ ಪೈರು ನಾಗುವಳಿ ಮಾಡಿಕೊಳ್ಳುವ ಹಕ್ಕು ಸುಮಾರು 2½ ವರುಷಕಾಲ ಅಂದರೆ 1909ನೆ ಇಸವಿ ಜೂನ್ ಅಖೈರುವರವಿಗೆ, ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ:—

1. ಕೋಲಾರ.	6. ಶಿಡ್ಲಘಟ್ಟ.
2. ಬವರಿಂಗಪೇಟೆ.	7. ಚಿಕ್ಕಬಳ್ಳಾಪುರ.
3. ಮಾಲೂರು.	8. ಬಾಗೇಪಲ್ಲಿ.
4. ಮುಳಬಾಗಿಲ್.	9. ಗುಡಿಬಂಡೆ ಸಬ್ ತಾಲ್ಲೂಕು.
5. ಚಿಂತಾಮಣಿ.	

(2) ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಕೋಲಾರ ಮೊಕ್ಕಾಂನಲ್ಲಿ ತಮ್ಮ ಆಫೀಸಿನಲ್ಲಿ 1907ನೆ ಇಸವಿ ಜನವರಿ 18ನ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡುತ್ತಾರೆ.

(3) ಸವಾಲುಮಾಡಲು ಇಚ್ಛೈಯುಳ್ಳವರು ನಗದಾಗಿ 50 ರೂಪಾಯಿ ಡಿಪಾಜಿಟ್ ಕಟ್ಟಿ ನಂತರ ಸವಾಲು ಮಾಡಬೇಕು.

(4) ಸವಾಲು ಅಂಗೀಕಾರವಾಗದ ಸವಾಲೆದಾರರ ಡಿಪಾಜಿಟ್ಟು ಮೊಬಲಗು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುತ್ತೆ.

(5) ಧರಖಾಸ್ತು ಮಂಜೂರಾದ ಸಂಗತಿಯು ಜಡವರಿಖಾಸ್ತುದಾರನಿಗೆ ತಿಳಿದ 10 ದಿವಸದವಳಗಾಗಿ ಹರಾಜು ಮೊಬಲಗು ಪೈಕಿ ಮೊದಲು ಟೀವಣಿ ಮೊಬಲಗು ಸೇರಿ ನಾಲ್ಕನೆ ಬಂದು ಭಾಗವನ್ನು ಮತ್ತು ಅದರಮೇಲೆ ರೂಪಾಯಿ ಬಂದಕ್ಕೆ ಬಂದಾಜೆ ಲೋಕಲ್ ಸೆಸ್ಸು ಸಹಿತ ರೂಬುರೂಬು ಹಾಜರ್ಮಾಡಿ ಬಾಕಿ ಹಣವನ್ನು ಅದರಮೇಲೆ ರೂಪಾಯಿ ಬಂದಕ್ಕೆ ಬಂದಾಜೆಯಂತೆ ಆಗುವ ಲೋಕಲ್ ಸೆಸ್ಸು ಸಹಿತ ಕೆಳಗೆ ಉದಹರಿತವಾಗಿರುವ ಮೇರ್ಬಜಾನೆಗೆ ಇರಸಾಲ್ಮಾಡತಕ್ಕದ್ದಾಗ್ಯೂ, ಮತ್ತು ಇಲಾಖೆ ಸಂರಕ್ಷಣಾರ್ಥವಾಗಿ ಬೇಕಾಗಿರುವ ಇತರ ಷರತ್ತುಗಳಿಗೂ ಕೂಡ ಮುಚ್ಚಲಿಕೆ ಬರೆದುಕೊಡಬೇಕು.

(6) ಬಾಕಿ ಹಜೂರ ಮೊಬಲಗು ಮತ್ತು ಅದರಮೇಲಣ ಸೆಸ್ಸು ಈಬೇಬಿಯಲ್ಲಿ ವಿವರಿಸಿರುವ ರೀತಿ 5 ಕಿಸ್ತುಗಳಲ್ಲಿ

1ನೆ ಖಷ್ ವಾಹೇಯಲ್ಲಿ	ಗುತ್ತಿಗೆ	ಮೊಬಲಗು	ಪೈಕಿ ಕೇಕಡಾ 5	ರೂಪಾಯಿ.
2ನೆ	ಡಿಟೋ	ಡಿಟೋ	10	ರೂಪಾಯಿ.
3ನೆ	ಡಿಟೋ	ಡಿಟೋ	15	ರೂಪಾಯಿ.
4ನೆ	ಡಿಟೋ	ಡಿಟೋ	20	ರೂಪಾಯಿ.
5ನೆ	ಡಿಟೋ	ಡಿಟೋ	25	ರೂಪಾಯಿ.

ಆಡ್ವಾನ್ಸಾಗಿ ಪಾವತಿ ಮಾಡಲ್ಪಡಬೇಕು.

(7) ಚಡಸವಾಲುದಾರನು ಮೇಲ್ಕಂಡ 5 ಮತ್ತು 6ನೆ ಕ್ಯಾರಾಗಳಲ್ಲಿ ಉದಹರಿತವಾಗಿರುವ ಷರತ್ತುಗಳಿಗೆ ವಿರೋಧವಾಗಿ ನಡದಲ್ಲಿ ತನ್ನ ಹಕ್ಕು ಕಳಕೊಳ್ಳುವದಲ್ಲದೆ ಆದುವರಿಗೂ ಕೊಟ್ಟಿರುವ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ದುಸರಾ ಹರಾಜು ಮಾಡಿಸಿ ನಷ್ಟಕ್ಕೆ ಈ ಚಡಸವಾಲ್ದಾರನನ್ನು ಗುರಿಪಡಿಸುತ್ತೆ.

(8) ಹರಾಜು ಡೆಪ್ಯೂಟಿ ಕವಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟ್

ಇನ್ಸ್ಟಿಹಾರ್ನ್ ಮೆಂ.

ತಾರೀಖು 4ನೆ ಡಿಸೆಂಬರ್ 1906.

ಹಾಸನ ಡಿಸ್ಟ್ರಿಕ್ಟ್ ಹೊಳೆನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಜೋಡಿ ಗೊಂಬಿ ಮಲ್ಲೇನಹಳ್ಳಿ ಗ್ರಾಮವು ಕಂದಾಯದ ಬಾಕಿಗೋಸ್ಕರ 1907ನೆ ಇಸವಿ ಜನವರಿ ಮಾಹೆ 21ನ ತಾರೀಖು ಸೋಮವಾರ ಬೆಳಗ ದಿವಸ 11 ಘಂಟೆ ಲಾಗಾಯತು ಹೊಳೆನರಸೀಪುರ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧ ಪಡಿಸಲ್ಪಟ್ಟಿರುತ್ತೆ.

ಹೆಚ್ಚಿನ ತಪಸೀಲ್ ಬಗ್ಗೆ 1906ನೆ ಇಸವಿ ಡಿಸೆಂಬರ್ ಮಾಹೆ 13ನೆ ತಾರೀಖು ಮೈಸೂರ ಗೆಜೆಟ್ಟಿನ II ನೆ ಭಾಗದ 841ನೆ ಪುಟವನ್ನು ನೋಡತಕ್ಕದ್ದು.

ಆರ್. ಡಬ್ಲ್ಯೂ. ವೆದರಾಲ್,
ಡೆಪ್ಯೂಟಿ ಕವಿಷನರ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ್.

ತಾರೀಖು 13ನೆ ಡಿಸೆಂಬರ್ 1906.

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ—1907ನೆ ಇಸವಿ ಫೆಬ್ರವರಿಗಾಗುವದಕ್ಕೆ ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲ್‌ನಲ್ಲಿ ತಯಾರಾಗತಕ್ಕ ಸಾರ್ವಜನಿಗಳಿಗೆ ಬೇಕಾದಂಥಾ ಎಲ್ಲಾ ರಬಿಂ ತುಪ್ಪಟಗಳು ಮತ್ತು ಇತರ ಸಾಮಾನುಗಳನ್ನು ಹಾಜರುಮಾಡಲು ಕಂಟ್ರಾಕ್ಟ್ ಪಡಿಯಲು ಇಷ್ಟವುಳ್ಳವರಿಂದ ಹಾಜರ್ಮಾಡಲ್ಪಡುವ ಸೀಲ್ಕವರುಗಳಿಗೆ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಟೆಂಡೆಂಟರವರು 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ದಿವಿ 10 ಘಂಟೆವರಿವಿಗೆ ಅಂಗೀಕರಿಸುವರು.

ಕಂಟ್ರಾಕ್ಟಿನ ತಪಶೀಲ್ವಾರು ಮೈಸೂರ್ ಗೆಜೆಟ್ ಡಿಸೆಂಬರ್ 20ನೆ ತಾರೀಖಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

ತಾರೀಖು 13ನೆ ಡಿಸೆಂಬರ್ 1906.

ಇದರಿಂದ ತಿಳಿಯಪಡಿಸುವದೇನಂದರೆ:—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದುಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ್ಯ 1907ನೆ ಇಸವಿ ಫೆಬ್ರವರಿಗಾಗುವದಕ್ಕೆ ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ ಧಾನ್ಯ, ಮುಸಾಲೆ ಜಿನಸುಗಳೂ ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವಂತೆ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಟೆಂಡೆಂಟರವರಿಂದ ಸ್ಯ 1907ನೆ ಇಸವಿ ಜನವರಿ ತಾರೀಖು 15ನೆ ಮಂಗಳವಾರ 10 ಘಂಟೆವರಿಗೂ ತೆಗದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1906ನೆ ಇಸವಿ ಡಿಸೆಂಬರ್ 20ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಡಿರುತ್ತದೆ.

ತಾರೀಖು 13ನೆ ಡಿಸೆಂಬರ್ 1906.

ಇದರಿಂದ ತಿಳಿಯಪಡಿಸುವದೇನಂದರೆ:—ಸ್ಯ 1907ನೆ ಇಸವಿ ಫೆಬ್ರವರಿ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ (ಆ ಎರಡು ದಿವಸಗಳೂ ಸೇರಿ) 12 ತಿಂಗಳ ತನಕ್ಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ ಇವರಿನಲ್ಲಿಹಾಕಿ ಮೊಹರುಮಾಡಿದ ದರಖಾಸ್ತುಗಳನ್ನು ಸ್ಯ 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ಬೆಳಿಗ್ಯೆ 10 ಘಂಟೆವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿಸಿ.

ಸರಬರಾಯಿ ಆಗಬೇಕಾದ ಸವದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಿಯಿರುತ್ತದೆ.

ಪಿ. ಎಸ್. ಅಚ್ಚುತರಾವ್,
ಸೆಂಟ್ರಲ್ ಜೈಲ್ ಸೂಪರಿಟೆಂಡೆಂಟ್.